# ರುಚಿ ರುಚಿ ರಂಬುಟಾನ್



ಕಾಮೆಟ್ಟು ಶೈಲಜಾ ಭಟ್

ಅಡಿಕೆ ತೋಟದ ಮಧ್ಯೆ ಹಾಗೆ ಸುಮ್ಮನೆ ಒಂದೆರಡು ಗಿಡ ರಂಬುಟಾನ್ ನೆಟ್ಟರೆ ಹೇಗೆ ಎಂಬ ಆಲೋಚನೆ ಹೊಳೆದದ್ದೇ ತಡ, ಬೆಳ್ತಂಗಡಿ ತಾಲ್ಲೂಕು ವೇಣೂರು ಸಮೀಪದ ಕಾಮೆಟ್ಟು ಸುಬ್ರಾಯ ಭಟ್ಟರು ಕಾರ್ಯಪ್ರವೃತ್ತರಾಗಿಯೇ ಬಿಟ್ಟರು. ನರ್ಸರಿಯೊಂದರಿಂದ ತಂದ ನಾಲ್ಕೈದು ರಂಬುಟಾನ್ ಗಿಡ ಭಟ್ಟರ ತೋಟದ ನಡುವೆ ತಲೆಯೆತ್ತಿತು. ಬಾಳೆ, ಏಲಕ್ಕಿ, ಕಾಳುಮೆಣಸಿನ ಕೃಷಿಯನ್ನು ಅಡಿಕೆ ತೋಟದ ಮಧ್ಯೆ ಬೆಳೆಸಿ ಉತ್ತಮ ಫಲ ಕಂಡ ಭಟ್ಟರಿಗೆ ವಿದೇಶಿ ಮೂಲದ ರಂಬುಟಾನ್ ಇಲ್ಲಿ ಫಲ ಕೊಡುವುದೋ ಇಲ್ಲವೋ ಎಂಬ ಅನುಮಾನ ಒಂದೆಡೆ. ಆದರೂ ಹಣ್ಣಿನ ರುಚಿಯನ್ನು ನೆಂಟರ ಮನೆಯಲ್ಲಿ ಕಂಡ ಭಟ್ಟರ ಮಡದಿ ಶೈಲಜಾ ಭಟ್, ಇದನ್ನು ಹೇಗಾದರೂ ಬೆಳೆಸಿ ನಮ್ಮಲ್ಲೇ ಹಣ್ಣು ಕೊಯ್ದು ತಿನ್ನಬೇಕೆಂಬ ಪಣವನ್ನೂ ತೊಟ್ಟರು.

ಭಟ್ಟರ ಆರೈಕೆ, ಕೈಗುಣದ ಫಲವಾಗಿ ನೆಟ್ಟ ಮೂರೇ ವರ್ಷಗಳಲ್ಲಿ ಗೊಂಚಲು ಗೊಂಚಲು ರಂಬುಟಾನ್ ಹಣ್ಣು ಪಡೆದೇಬಿಟ್ಟರು. ರುಚಿಯೋ ತಾವು ನೆಂಟರ ಮನೆಯಲ್ಲಿ ತಿಂದ ಹಣ್ಣನ್ನೂ ಮೀರಿಸುವಂತಿತ್ತು. ಸುಬ್ರಾಯ ಭಟ್ಟರಿಗೆ ಖುಷಿಯಾದರೆ, ಹಣ್ಣು ಕೊಯ್ದು ಕೈತುಂಬಾ ಹಿಡಿದುಕೊಂಡ ಶೈಲಜಾ ಅವರಿಗೆ ಸಂತೃಪ್ತಿಯ ಭಾವ.

ರಂಬುಟಾನ್ ಮಲೇಷ್ಯಾ ಮೂಲದ ರುಚಿಕರ ಹಣ್ಣು. ಶ್ರೀಲಂಕಾ, ಇಂಡೋನೇಷ್ಯಾಗಳಲ್ಲೂ ಹೇರಳವಾಗಿ ಬೆಳೆಯುತ್ತಾರೆ. ಈಗ ಭಾರತದಾದ್ಯಂತ ತೋಟದಲ್ಲಿ ಹಣ್ಣು ನಳನಳಿಸುತ್ತಿದೆ. ಮಿಶ್ರ ಬೆಳೆಯಾಗಿ ಬೆಳೆದವರೆಲ್ಲ ಇದರ ಅಧಿಕ ಲಾಭ ಕಂಡು ಸ್ವತಂತ್ರ ಬೆಳೆಯಾಗಿ ಬೆಳೆದು ತಮ್ಮ ಗಳಿಕೆಯ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ರಂಬುಟಾನ್ ಗಿಡದ ವೈಜ್ಞಾನಿಕ ಹೆಸರು ನೆಫಿಲ್ಲಿಯಂ ಲೆಪ್ಪಾಸಿಯಂ (Nephelium lappaceum). ಗಿಡದಲ್ಲಿ ಹಸುರು ಬಣ್ಣದ ಕಾಯಿಗಳಾಗುತ್ತವೆ. ಕೆಂಪು ಬಣ್ಣದ ಸಿಪ್ಪೆಯ ಮೇಲೆ ಮುಳ್ಳುಗಳಿದ್ದು ಹಣ್ಣನ್ನು ಒಡೆದು ನೋಡಿದರೆ ಬಿಳಿ ಬಣ್ಣದ ತಿರುಳು ಇದೆ. ಇದು ಸಿಹಿ–ಹುಳಿ ಮಿಶ್ರಿತ ಹಣ್ಣು. ಕೆಂಪು ಮಾತ್ರವಲ್ಲದೆ ಕಿತ್ತಳೆ, ಹಳದಿ ಬಣ್ಣಗಳಲ್ಲಿಯೂ ರಂಬುಟಾನ್ ಬಿಡುವ ಗಿಡ ವೈವಿಧ್ಯವಿದೆ. ಹಣ್ಣುಗಳನ್ನು ಹಾಗೆಯೂ ತಿನ್ನಬಹುದು, ಜೆಲ್ಲಿ, ಜಾಮ್, ಐಸ್‌ಕ್ರೀಮ್, ಮಿಲ್ಕ್ ಶೇಕ್ ಮಾಡಿಯೂ ಸವಿಯಬಹುದು. ಪೋಷಕಾಂಶಗಳ ಆಗರ, ಬಿ ಮತ್ತು ಸಿ ಜೀವಸತ್ವಗಳನ್ನು ಹಣ್ಣು ಹೊಂದಿದೆ.

ರಂಬುಟಾನ್ ಗಿಡಕ್ಕೆ ಹೆಚ್ಚಿನ ಆರೈಕೆ ಬೇಡ. ಜೂನ್ ತಿಂಗಳಿಂದ ಮೂರು ತಿಂಗಳ ಕಾಲ ಹಣ್ಣುಗಳು ಯಥೇಚ್ಛವಾಗಿ ಸಿಗುತ್ತವೆ. ಹಣ್ಣು ಬೇಗನೆ ಕೆಡುವುದಿಲ್ಲ. ಒಮ್ಮೆ ರುಚಿ ನೋಡಿದವರು ಮತ್ತೆ ರಂಬುಟಾನ್ ಫ್ಯಾನ್ ಆಗುವುದರಲ್ಲಿ ಸಂಶಯವೇ ಇಲ್ಲ. ಕಾಮೆಟ್ಟು ಶೈಲಜಾ ಅವರ ತೋಟದ ಹಣ್ಣು ರುಚಿ ನೋಡಿದವರಲ್ಲಿ ನಾನೂ ಒಬ್ಬಳು ಎಂಬುದನ್ನು ಬೇರೆ ಹೇಳಬೇಕೇ?

■ ಯು.ಎ.


## ರಾಜೇಂದ್ರ ಆಯುರ್ವೇದಿಕ್ ಕ್ಲಿನಿಕ್

1972 50 Years Golden Jubilee

**ಬೆಂಗಳೂರು**



ಎಲ್ಲಾ ವಿಧದ ಕ್ಯಾನ್ಸರ್, ಪಾರ್ಶ್ವವಾಯು, ಸಂಧಿವಾತ, ಚರ್ಮ ರೋಗಗಳು, ಸೈನಸ್, । ಅಸ್ತಮಾ, ಅಪಸ್ಮಾರ, ಖಿನ್ನತೆ, ಭಯ, ಆತಂಕ, ನಡುಕ ಇತ್ಯಾದಿ ಸೇರಿದಂತೆ ದೀರ್ಘಕಾಲದ ಕಾಯಿಲೆಗಳಿಗೆ ವಿಶೇಷ ವೈದ್ಯಕೀಯ ಚಿಕಿತ್ಸೆ.

ಮಾನವರಲ್ಲಿ ರೋಗಗಳು ನಾಲ್ಕು ವಿಧದ ಕಾರಣಗಳಿಂದ ಉಂಟಾಗುತ್ತದೆ. ತಪ್ಪುಗಳು – ಅಪಘಾತಗಳು ವಂಶಪಾರಂಪರ್ಯ ಕಾರಣಗಳು ಹಿಂದಿನ ಜನ್ಮ ಕರ್ಮಗಳಿಂದ ಮನುಷ್ಯರು ಪ್ರಭಾವಿತರಾಗಿದ್ದಾರೆ.

**ವಿಜ್ಞಾನ ಆಕಾಶದೆತ್ತರಕ್ಕೆ ಬೆಳೆದು ಜಗತ್ತು ದಿನದಿಂದ ದಿನಕ್ಕೆ ಆಧುನಿಕವಾಗುತ್ತಿದ್ದರೂ ಮೇಲಿನ ಪ್ರಭಾವದ ಚಕ್ರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ, ಅಪಘಾತಗಳು ಮತ್ತು ಅನುವಂಶಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ವಿಜ್ಞಾನವು ನಮಗೆ ಉಪಯುಕ್ತವಾಗಿದೆ. ಆದರೆ ಕರ್ಮ ರೋಗಗಳ ಸಂದರ್ಭದಲ್ಲಿ ತಪ್ಪುಗಳು – ಅಪಘಾತಗಳು, ವಿಜ್ಞಾನವು ಖಂಡಿತವಾಗಿಯೂ ಉಪಯುಕ್ತವಲ್ಲ. ಏಕೆಂದರೆ ಕರ್ಮ ರೋಗಗಳು ಬರೀ ಔಷಧದಿಂದ ಗುಣವಾಗುವಂಥದ್ದಲ್ಲ.**

ಭಾರತೀಯ ವೈದ್ಯಕೀಯ ಪದ್ಧತಿಯು ಕರ್ಮ ರೋಗಗಳ ಬಗ್ಗೆ ವಿವರವಾಗಿ ವಿವರಿಸಿದೆ. ಕೆಲವರಿಗೆ ವಿನಾಕಾರಣ ಕಾಯಿಲೆಗಳು ಬರುತ್ತವೆ. ಕೆಲವರಿಗೆ ಎಷ್ಟೇ ಚಿಕಿತ್ಸೆ ನೀಡಿದರೂ ಗುಣವಾಗುವುದಿಲ್ಲ. ಕೆಲವರಿಗೆ ಸೂಕ್ತವಲ್ಲದ ಕಾಯಿಲೆಗಳು ಬರುತ್ತವೆ. ಇದರ ಬಗ್ಗೆ ದೀರ್ಘ ವಿವರಣೆಗಳನ್ನು ನೀಡಬಹುದು.

ಡಾ.ಕೆ.ವಿ.ರಾಜೇಂದ್ರನ್ RAMP, DNYS, M.A., ಕಳೆದ 50 ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ದೇವರು ಮತ್ತು ಗುರುಗಳ ಕೃಪೆಯಿಂದ ಇಂತಹ ಕ್ಲಿಷ್ಟಕರ ಮತ್ತು ಸಂಕೀರ್ಣ ಕಾಯಿಲೆಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆ.

**ಬೆಂಗಳೂರಿನಲ್ಲಿ ಪ್ರತಿ ತಿಂಗಳ 6 ರಿಂದ 25 ರವರೆಗೆ ನೀವು ವೈದ್ಯರನ್ನು ವೈಯಕ್ತಿಕವಾಗಿ ಭೇಟಿ ಮಾಡಬಹುದು.**

ನಂ.4, 6ನೇ ಕ್ರಾಸ್, ಎಂ.ಎಸ್.ರಾಮಯ್ಯ ರಸ್ತೆ (ಎಚ್ ಎಂಟಿ ರಸ್ತೆ),
ಅಚ್ಯುಪ್ಪ ದೇವಸ್ಥಾನದ ಬಸ್ ನಿಲ್ದಾಣ, ಎಸ್ಸಾರ್ ಪೆಟ್ರೋಲ್ ಬಂಕ್ ಎದುರು
ಸುಬೇದಾರಪಾಳ್ಯ, ಯಶವಂತಪುರ, ಬೆಂಗಳೂರು–22,

**ಮೊ : 9344455511**